ಇ) ಇದ್ದಲ್ಲಿ ಬೈಪಾಸ್ ರಸ್ತೆ ಬಗ್ಗೆ ಕೈಗೊಂಡ ಕ್ರಮವೇನು ? ಈ ವರ್ಷದಲ್ಲಿ ಬೈಪಾಸ್ ರಸ್ತೆಯನ್ನು ಪೂರ್ಣಗೊಳಿಸಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ತಿಳಿದಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಬೈಪಾಸ್ ರಸ್ತೆಗಾಗಿ ಬೇಕಾಗುವ ಜಮೀನು ಪಡೆದುಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಭೂಸ್ವಾಧೀನವಾದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳುವ ಪ್ರಸ್ತಾಪವಿದೆ.

ಹುಕ್ಕೇರಿ ತಾಲ್ಲೂಕು ಚಿಕ್ಕೋಡಿ ಉಪ ಕಾಲುವೆ ನಿರ್ಮಾಣ ಅರ್ಧಕ್ಕೆ ನಿಂತಿರುವ ವಿಚಾರ

2253: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):– ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಚಿಕ್ಕೋಡಿ ಉಪ ಕಾಲುವೆ ಅಂದರೆ ಬ್ಲಾಕ್ ನಂ.15. ಶಿರಡಾಣ ಜಾಂಗಟಿಹಾಳ್ ಗ್ರಾಮಗಳಿಗೆ ನೀರು ಹೋಗುವ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಹೀಗಾಗಲು ಕಾರಣವೇನು; ಈ ವಿಳಂಬ ನೀತಿಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು;

ಇ) ಅರ್ಧಕ್ಕೆ ನಿಂತ ಕಾಲುವೆ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):–

ಅ) ಬಂದಿದೆ. ಸದರಿ ಗ್ರಾಮಗಳು ಉಪ ಕಾಲುವೆಯ ಬ್ಲಾಕ್ ನಂ. 16 (ಅ)ದಲ್ಲಿ ಬರುತ್ತದೆ.

ಆ) ಭೂಸ್ವಾಧಿನ ಪಡಿಸಿಕೊಳ್ಳುವಲ್ಲಿ ತೊಂದರೆ ಮತ್ತು ಸಿಡಿಮದ್ದಿನಿಂದ ಸ್ಫೋಟಿಸುವ ಕಾರ್ಯಕ್ಕೆ ಸರಹದ್ದಿನಲ್ಲಿ ಗ್ರಾಮಸ್ಥರು ತಕರಾರು ಮಾಡುತ್ತಿದ್ದುದರಿಂದ ಕಾಮಗಾರಿಯಲ್ಲಿ ವಿಳಂಬವಾಗಿದೆ.

ಇ) ಜೂನ್ 1993ರ ವೇಳೆಗ ಕಾಲುವೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

11.20 ಎ.ಎಂ

ಅಧ್ಯಕ್ಷರು:– ಸಭೆಯ ಮುಂದೆ ಮಂಡಿಸಲಾಯಿತು.

1. ಶ್ರೀ. ಎನ್. ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿ) ಅವರು:–

"1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

1989–90ನೇ ಸಾಲಿನ ಬೆಂಗಳೂರಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 17ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ"

2. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಸಹಕಾರ ಮಂತ್ರಿ) ಅವರು:–

1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 130ನೇ ಕಲಮಿನ ಮೇರೆಗೆ:

1. ಯಳಂದೂರು ತಾಲ್ಲೂಕು, ಗೌಡಹಳ್ಳಿಯಲ್ಲಿನ ರೇಷ್ಮೆ ಮತ್ತು ರೈತರ ಸಹಕಾರ ಸಂಘ ನಿಯಮಿತದ ವಾರ್ಷಿಕ ಮಹಾಸಭೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ: 11–11–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 347: ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.

2. ಧಾರವಾಡ ಜಿಲ್ಲೆಯ ಸವಣೂರು ಪ್ರಾಥಮಿಕ ಸಹಕಾರಿ ವ್ಯವಸಾಯ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಚುನಾವಣೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ: 15–12–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 406:ಸಿಎಲ್‌ಎಂ:92ರ ಕ್ರಮಾಂಕದ ಆದೇಶ.

3. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 20ರ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ: 23–09–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ:53: ಸಿಎಲ್‌ಎಂ:90ರ ಕ್ರಮಾಂಕದ ಅಧಿಸೂಚನೆ.

4. ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ವ್ಯವಸಾಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಚುನಾವಣೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ:21–11–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 395:ಸಿಎಲ್‌ಎಂ:92ರ ಕ್ರಮಾಂಕದ ಆದೇಶ.

4ಎ. ಮೇಲ್ಕಂಡ (ಕ್ರಮಸಂಖ್ಯೆ:4) ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 3-12-92 ರಂದು ಹೊರಡಿಸಲಾದ ಸಿಎಂ.ಡಬ್ಲ್ಯು 395:ಸಿಎಲ್‌ಎಂ:92ರ ತಪ್ಪೋಲೆಯನ್ನು ಮಂಡಿಸುತ್ತೇನೆ''

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:

3. (ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ) ಅವರ ಪರವಾಗಿ):–

''1950ನೇ ಇಸವಿಯ ರಸ್ತೆ ಸಾರಿಗೆ ನಿಗಮದ ಅಧಿನಿಯಮ 35 (3)ನೇ ಕಲಮಿನ ಮೇರೆಗೆ:

1991–92ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 31ನೇ ಆಡಳಿತ ವರದಿಯನ್ನು ಮಂಡಿಸುತ್ತೇನೆ''

ಹಾರ್ನಹಳ್ಳಿ ರಾಮಸ್ವಾಮಿ:–

4. ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ ಅವರ ಪರವಾಗಿ):–

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರಗೆ:

1991–92ನೇ ಸಾಲಿನ ಚಾಮುಂಡಿ ಮೆಷೀನ್ ಟೂಲ್ಸ್ ಲಿಮಿಟೆಡ್‌ನ 16ನೇ ವರದಿಯನ್ನು ಮಂಡಿಸುತ್ತೇನೆ''

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:-

5. ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿ) ಅವರ ಪರವಾಗಿ:-

"1956ನೇ ಇಸವಿಯ ಕಂಪನಿಗಳ ಅಧಿನಿಯಮದ 619(ಎ) ಕಲಮಿನ ಮೇರೆಗೆ:

1990-91ನೇ ಸಾಲಿನ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ"

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:-

6. ಶ್ರೀ ಹೆಚ್. ಕೆ.ಪಾಟೀಲ್ (ಜವಳಿ ರಾಜ್ಯ ಮಂತ್ರಿ) ಅವರ ಪರವಾಗಿ:-

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

1984-85, 1985-86 ಮತ್ತು 1986-87ನೇ ಸಾಲುಗಳ ಕರ್ನಾಟಕ ರಾಜ್ಯ ಜವಳಿ ಪ್ರೈವೇಟ್ ನಿಯಮಿತದ ವಾರ್ಷಿಕ ವರದಿಗಳು ಹಾಗೂ ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ."

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:-

7. ಶ್ರೀ ರಮಾನಾಥ ರೈ (ಗೃಹ ರಾಜ್ಯ ಮಂತ್ರಿ) ಅವರ ಪರವಾಗಿ:-

"1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ:

1. ಮನರಂಜನಾ - ಕಾರ್ಮಿಕ ಕಲ್ಯಾಣ ಆಡಳಿತಾಧಿಕಾರಿಗಳು ಕಾರಿಗನೂರು ಇವರಿಗೆ 16 ಎಂ.ಎಂ. ಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸಲು ದಿನಾಂಕ: 13-11-1992 ರಿಂದ 12-11-1993ರವರೆಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ: 17-02-1993ರಂದು ಹೊರಡಿಸಲಾದ ಹೆಚ್‌ಡಿ: 35:ಸಿಎನ್‌ಎ:92ರ ಕ್ರಮಾಂಕದ ಆದೇಶ.

2. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಕವಿತಾಳದ ತ್ರಿಯಂಬಕೇಶ್ವರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 01-02-1993ರಂದು ಹೊರಡಿಸಲಾದ ಹೆಚ್‌ಡಿ:203:ಸಿಎನ್‌ಎ:92ರ ಕ್ರಮಾಂಕದ ಅಧಿಸೂಚನೆ.

3. ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದ ವಿಜಯಲಕ್ಷ್ಮಿ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರ ಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 27-02-1993ರಂದು ಹೊರಡಿಸಲಾದ ಹೆಚ್‌ಡಿ:240:ಸಿಎನ್‌ಎ:92ರ ಕ್ರಮಾಂಕದ ಅಧಿಸೂಚನೆ.

4. ದಕ್ಷಿಣ ಕನ್ನಡ ಜಿಲ್ಲೆ. ಕಾರ್ಕಳ ತಾಲ್ಲೂಕು ಹೆಬ್ರಿಯ ಶ್ರೀ ರಾಘವೇಂದ್ರ ಸಂಚಾರಿ ಚಿತ್ರ ಮಂದಿರವನ್ನು ತಾತ್ಕಾಲಿಕ ಚಿತ್ರ ಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 27-02-1993ರಂದು ಹೊರಡಿಸಲಾದ ಹೆಚ್‌ಡಿ:241:ಸಿಎನ್‌ಎ:92ರ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ"

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:–

8. (ಶ್ರೀ ಶ್ರೀರಂಗದೇವರಾಯಲು (ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ) ಅವರು ಪರವಾಗಿ:–

"1980ನೇ ಇಸವಿಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ನಿಯಮದ 25ನೇ ಕಲಮಿನ ಮೇರೆಗೆ

1991–92ನೇ ಸಾಲಿನ ಮೈಸೂರಿನ ಕಾವೇರಿ ಜಲಾನಯನ ಯೋಜನೆಗಳ ಹಾಗೂ ತುಂಗಭದ್ರಾ ಯೋಜನೆಯ ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ"

ಅಧ್ಯಕ್ಷರು:– ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಚಿತ್ರದುರ್ಗ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ಕಾಲರಾ ಹರಡಿರುವ ಬಗ್ಗೆ

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಒಂದು ತಮ್ಮ ಅನುಮತಿಯನ್ನು ಕೋರಿ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೆ. ಅದರ ಪ್ರಕಾರ ಈಗ ಈ ವಿಚಾರ ಪ್ರಸ್ತಾಪ ಮಾಡಬಯಸುತ್ತೇನೆ. ಈ ಸರ್ಕಾರಕ್ಕೆ ಏನು ಹೇಳಬೇಕು ನನಗೆ ಗೊತ್ತಾಗುತ್ತಿಲ್ಲ. ಕೇವಲ ಮೈಸೂರು ಜಿಲ್ಲೆಯಲ್ಲೇ ಅಲ್ಲ, ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೂ ಕೂಡ ನೋಡಿದ್ದೇನೆ. ನಾನು ಮೊನ್ನೆ ಶುಕ್ರವಾರ ಈ ಸದನವನ್ನು ಮುಗಿಸಿಕೊಂಡು ಹೋದಮೇಲೆ ನನಗೆ ತಿಳಿಯಿತು. ಇಡೀ ಚಿತ್ರದುರ್ಗ ಜಿಲ್ಲೆಯ 9 ತಾಲ್ಲೂಕಿನ ಮಕ್ಕಳು ಮತ್ತು 150ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಎಲ್ಲಾ ಕಡೆಯಲ್ಲೂ ಕಾಲರಾ ಹರಡಿದೆ. ಇದನ್ನು ನೀವು ಕರುಳು ಬೇನೆ ಎಂದು ಬೇಕಾದರೂ ಕರೆಯಿರಿ, ಅಥವಾ ಕಾಲರ ರೋಗ ಎಂದು ಬೇಕಾದರೂ ಕರೆಯಿರಿ. ನಾನು ಚಿತ್ರದುರ್ಗ ಮತ್ತು ಹಿರಿಯೂರಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಏನು ನೋಡಿಕೊಂಡು ಬಂದಿದ್ದೇನೆ; ಅದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ಸುಮಾರು 600ಕ್ಕೂ ಹೆಚ್ಚು ಜನರು ಆ ಆಸ್ಪತ್ರೆಗೆ ಬಂದು ವ್ಯಾಧಿಗೆ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ 20ಕ್ಕಿಂತ ಹೆಚ್ಚು ಜನರು ಸತ್ತಿದ್ದಾರೆ. ಇದು ಆಸ್ಪತ್ರೆಗೆ ಬಂದಿರತಕ್ಕ ಲೆಕ್ಕ. ಅಲ್ಲಿರತಕ್ಕ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಯವರಿಗೆ ಇದರ ಪರಿಚಯವೇ ಇಲ್ಲ. ಈ ರೀತಿ ಏತಕ್ಕಾಗಿ ಎಂದು ನಾನು ಅವರನ್ನು ಪ್ರಶ್ನೆ ಮಾಡಿದಾಗ ಅವತ್ತು ವರದಿಯನ್ನು ತರಿಸಿಕೊಡುತ್ತೇನೆಂದು ಹೇಳಿದರು. ಇದನ್ನು ನಾನು ಯಾವುದೇ ದುರುದ್ದೇಶದಿಂದ ಹೇಳುತ್ತಿಲ್ಲ. ನಾನು ಅಲ್ಲಿಗೆ ಹೋಗಿ ಕೇಳಿ, ಗಲಾಟೆಯನ್ನು ಮಾಡಿದ ಮೇಲೆ ಜಿಲ್ಲಾಧಿಕಾರಿಗಳು ಒಂದು ಪತ್ರವನ್ನು ಜಿಲ್ಲಾ ಆರೋಗ್ಯಾಧಿಕಾರಿಯವರಿಗೆ ಬರೆದಿದ್ದಾರೆ. "ನಿಮ್ಮ ವರದಿಯಲ್ಲಿ ಸರಿಯಾದ ಮಾಹಿತಿ ದೊರೆಯುತ್ತಿಲ್ಲವೆಂಬುದನ್ನು ಸಹ ಈ ದಿನ ನಡೆದ. ಸಭೆಯ ಸಂದರ್ಭದಲ್ಲಿ ಸಹ ತಿಳಿಸಲಾಗಿದೆ" ಎಂದು ನಾನು ಹೋದ ಮೇಲೆ ಅಲ್ಲಿ ಒಂದು ಸಭೆಯನ್ನು ಮಾಡಿದರು. ಈ ರೋಗ ಎಷ್ಟೆಷ್ಟು ಜನರಿಗೆ ಆಗಿದೆ ಎಂಬುದನ್ನು ಹೇಳಿದರೂ, ಜಿಲ್ಲಾ ಆಡಳಿತವನ್ನು ನಡೆಸುವ ಯಾವುದೇ ಅಧಿಕಾರಿವರ್ಗ ಇರಲಿ ಅವರಿಗೆ ಎಲ್ಲಿ ಕಾಲರಾ ಇದೆ ಎಂಬುದು ಗೊತ್ತಿಲ್ಲ. ಅಲ್ಲಿರತಕ್ಕ ಪೋಲಿಸ್ ಸೂಪರಿಂಟೆಂಡೆಂಟ್‌ರವರು ಹೇಳುತ್ತಾರೆ. ಎಷ್ಟು ಜನ ಸತ್ತಿದ್ದಾರೋ ನನಗೆ ಗೊತ್ತಿಲ್ಲವೆಂದು ಹೇಳಿದರು. ಆಮೇಲೆ 11 ಜನ ಸತ್ತಿದ್ದಾರೆಂದು ಹೇಳಿದರು; ನಿಮ್ಮ ಆಸ್ಪತ್ರೆಯ ಅಂಕಿಅಂಶಗಳ ಪ್ರಕಾರ 19 ಜನ ಸತ್ತಿದ್ದಾರೆ ಎಂದು ನಾನು ಹೇಳಿದಾಗ, ಹೌದು, ಹಾಗೇನು ಎಂದು ನಾನು ಹೇಳಿದ ರೀತಿಯಲ್ಲಿ ತಮ್ಮ ಅಂಕಿಅಂಶಗಳನ್ನು ಸರಿಪಡಿಸಿಕೊಂಡರು. ಇಂಥ ದುಃಸ್ಥಿತಿಯಲ್ಲಿ ಈ ಸರ್ಕಾರದ ಆಡಳಿತ ನಡೆಯುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದಕ್ಕಿಂತ ಹೆಚ್ಚಾಗಿ ನೂರಾರು ಜನರಿಗೆ ಈ